# ಹುಡುಕಿ ಕೊಡು

ಅವಳ ಮಾಂಸ ಮಜ್ಜೆಯ
ನೆರಳು, ಮುಟ್ಟಿನ ವಾಸನೆ ಬಡಿಯದೇ
ಪೊಗರಿದ ಅವನೆಂಬವನ ಹುಡುಕಿ ಸೋತಿದ್ದೇನೆ
ಹುಡುಕಿ ಕೊಡು ಹೇ! ಪ್ರಭು.

ಒಡಲ ಮಾಂಸದ ಹೊದಿಕೆಯೊಳಗೆ
ಜೀವವ ಹದವಾಗಿ ಕಾಪಿಟ್ಟು
ಅವನುಸಿರ ಹಸಿರ ಮಾಡಿ ಹಣ್ಣಾದವಳು

ರಕ್ತ ಹೀರಿದ ಬಟ್ಟೆಯ ಹಿಂಡಿ
ನಿಂತವಳ ಸೆರಗು ಹಿಡಿದು
ಕಾಡಿದವನ ಎದೆಗವುಚಿಕೊಂಡವಳು

ಮಾಂಸಕಲಶದ ತೊಟ್ಟು
ಬಾಯಿಗಿಟ್ಟೊಡನೆ ಕಿರುನಕ್ಕು
ಕಣ್ಣುಮಿಟುಕಿಸಿದವನ
ಲೊಚಲೊಚ ರಕ್ತ ಹೀರುವವನ
ಕಣ್ಣೊಳಗೆ ತುಂಬಿಸಿಕೊಂಡವಳು

ಅವಳಿಲ್ಲದೇ ಜಗದ ಬೆಳಕಿಗೆ
ಕಣ್ಣು ತೆರೆದವನ ಹುಡುಕಿ ಸೋತಿದ್ದೇನೆ
ಹುಡುಕಿ ಕೊಡು ಹೇ! ಪ್ರಭು

ಅವನೊಳಗಿನ ಬೆಂಕಿಗೆ ತಂಪು ಬಟ್ಟಲಾದವಳು
ಆ ಬೆಂಕಿಯ ತಣ್ಣಗಾಗಿಸಿ
ಉದರದೊಳು ಹೊತ್ತವಳು
ನೋವ ಹಾಸಿಗೆಯಲ್ಲಿ ಮಿಂದು
ಹೆತ್ತ ಜೀವವ ಅವನ ಹೆಸರಿಗೆಂದೇ
ಬಿಟ್ಟವಳು ಅವಳಿಲ್ಲದೇ ಬೆಳೆದ
ಅವನೆಂಬವನ ಹುಡುಕಿ ಸೋತಿದ್ದೇನೆ.

ಆದರವನ ದೇವರಿಗೆ ಅವಳ
ಮಾಂಸ ಮಜ್ಜೆಯ ನೆರಳು
ಮುಟ್ಟಿನ ವಾಸನೆ ಮೈಲಿಗೆಯಂತೆ.
ಆ ದೇವನೆಂಬವನ ಹುಡುಕಿ ಕೊಡು ಹೇ! ಪ್ರಭು

● ನಾಗರೇಖಾ ಗಾಂವಕರ



ಕಲೆ: ಸೃಜನ್